# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **731** |
| ಸದಸ್ಯರ ಹೆಸರು | : ಶ್ರೀ ಸಿ.ಎನ್.ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : **22.02.2023.** |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರೈತರ ಜಮೀನುಗಳಿಗೆ ಹೋಗಲು ರಸ್ತೆ ಇಲ್ಲದಿದ್ದರೆ 12 ಅಡಿ ರಸ್ತೆ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲು ಸರ್ಕಾರ ಇತ್ತೀಚೆಗೆ ಕ್ರಮ ತೆಗೆದುಕೊಂಡಿದೆಯೇ; | ರೈತರ ಜಮೀನುಗಳಿಗೆ ಹೋಗಲು ರಸ್ತೆ ಇಲ್ಲದಿದ್ದರೆ 12 ಅಡಿ ರಸ್ತೆ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| ಆ) | ಈ ಯೋಜನೆ ರೂಪಿಸಿರುವ ದ್ಯೇಯೋದ್ದೇಶ ಮತ್ತು ರೂಪರೇಷಗಳೇನು; (ಸಂಪೂರ್ಣ ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಇ) | ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ರೈತರು ಇದ್ದು, ಹಿಂದಿನ ಕಾಲದಲ್ಲಿ ಜಮೀನುಗಳಿಗೆ ಹೋಗಿ ಬರಲು ರಸ್ತೆ ಇದ್ದು ಈಗ ಸ್ಥಳ ಬಿಡದಿರುವ ಕಾರಣ ಅಥವಾ ರಸ್ತೆಯೇ ಇಲ್ಲವೆಂದ ಮೇಲೆ ಆ ಜಮೀನುಗಳಿಗೆ ಹೋಗಿ ಬರಲು ಅನಾನುಕೂಲವಾಗಿರುವ ರೈತರ ಅನುಕೂಲಕ್ಕೆ ಯಾವ ರೀತಿಯಲ್ಲಿ ರಸ್ತೆಯನ್ನು ಕಲ್ಪಿಸಿಕೊಡಲಾಗುವುದು; (ವಿವರ ನೀಡುವುದು) | ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 59 ರಲ್ಲಿ 'ದಾರಿಯ ಹಕ್ಕುಗಳು ಮತ್ತು ಇತರೆ ಅನುಭೋಗದ ಹಕ್ಕುಗಳ' ಬಗ್ಗೆ ತಿಳಿಸಲಾಗಿದ್ದು, ಸಂಬಂಧಪಟ್ಟ ಜಮೀನುಗಳ ಭಾಗಿದಾರರು ಒಪ್ಪಿರುವಂತಹ ಸಂದರ್ಭದಲ್ಲಿ ಹಕ್ಕುಗಳ ದಾಖಲೆ ರಿಜಿಸ್ಟರ್‌ನಲ್ಲಿ ನಮೂದು ಮಾಡಲು ಅವಕಾಶಗಳು ಇದ್ದು, ಗ್ರಾಮ ನಕ್ಷೆಯಲ್ಲಿ ಕಂಡಂತೆ ಕಾಲುದಾರಿ, ಬಂಡಿದಾರಿ ಅಥವಾ ರಸ್ತೆ ಇವುಗಳನ್ನು ಬಳಕೆಗೆ ಬಿಟ್ಟುಕೊಡಲು ಅವಕಾಶವಿದೆ. ಅದರಂತೆ, ಆಯಾ ತಾಲ್ಲೂಕಿನ ತಹಶೀಲ್ದಾರ್‌ಗಳು ನಕಾಶೆ ಕಂಡ ಕಾಲುದಾರಿ, ಬಂಡಿದಾರಿ ಅಥವಾ ರಸ್ತೆಗಳಲ್ಲಿ ಅನ್ಯ ಕೃಷಿ ಬಳಕೆದಾರರು ತಿರುಗಾಡಲು ಅವಕಾಶ ನೀಡದೆ ಅಡ್ಡಿಪಡಿಸುವಂತಹ ಅಥವಾ ಬಳಸಲು ಮುಚ್ಚಿರುವಂತಹ ಸಂದರ್ಭದಲ್ಲಿ ಅವುಗಳನ್ನು ತೆರವುಗೊಳಿಸಿ ತಿರುಗಾಡಲು ದಾರಿಗಳನ್ನು ಸುಗಮಗೊಳಿಸಲು ಅವಕಾಶವಿರುತ್ತದೆ. |
| ಈ) | ಈ ಬಗ್ಗೆ ಸರ್ಕಾರ ಹೊರಡಿಸಿರುವ ಸುತ್ತೋಲೆ/ಆದೇಶ/ಅಧಿಸೂಚನೆಗಳ ಪ್ರತಿಯನ್ನು ಒದಗಿಸುವುದು? | ಈ ಬಗ್ಗೆ ಯಾವುದೇ ಸುತ್ತೋಲೆ/ಆದೇಶ/ಅಧಿಸೂಚನೆ ಇರುವುದಿಲ್ಲ. |

ಸಂಖ್ಯೆ: ಆರ್‌ಡಿ 45 ಎಲ್‌ಜಿಕ್ಯೂ 2023

**(ಆರ್.ಅಶೋಕ)**
ಕಂದಾಯ ಸಚಿವರು